ದಿನಾಂಕ: 25.10.2025 ರಂದು ಸಾಕ್ಷಿಯನ್ನು ಕರೆಸಲಾಯಿತು ಮತ್ತು ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು 1, 2, 4 ರಿಂದ 6 ನೇ ಪ್ರತಿವಾದಿಗಳ ಪರ ಶ್ರೀ ಎಸ್ ಜೆ ವಕೀಲರಿಂದಃ**

ದಾವಾ ಐಟಂ ನಂ.9 ರ ಸರ್ವೆ ನಂ.27/1 ಆಗಿರುತ್ತದೆ. ಅದು ಒಟ್ಟು 68 ಎಕರೆ 15 ಗುಂಟೆ ಇದೆ. ಅದರ ಚೆಕ್ಕು ಬಂದಿ ಪೂರ್ವಕ್ಕೆ ಹೂವಿನಹೊಳೆ ಗಡಿ , ಪಶ್ಚಿಮಕ್ಕೆ ಚಾನಲ್ , ಉತ್ತರಕ್ಕೆ ಸುವರ್ಣಮುಖಿ ತೊರೆ ಮತ್ತು ದಕ್ಷಿಣಕ್ಕೆ ನಾಗೇನಹಳ್ಳಿ ಇದೆ. ದಾವಾ ನಂ.10 ರ ವಿಸ್ತೀರ್ಣ ಎಷ್ಟು ಎಂಬ ಪ್ರಶ್ನೆಗೆ ಸಾಕ್ಷಿ ದಾವಾ ಐಟಂ ನಂ.9 ಮತ್ತು 10 ಒಟ್ಟಾಗಿ 68 ಎಕರೆ 15 ಗುಂಟೆ ಇದೆ ಎಂದು ನುಡಿಯುತ್ತಾರೆ. ಯಾವ ಉದ್ದೇಶಕ್ಕಾಗಿ ಅವುಗಳನ್ನು ದಾವಾ ಐಟಂ ನಂ.9 ಮತ್ತು 10 ಎಂದು ಪ್ರತ್ಯೇಕವಾಗಿ ಮಾಡಿದ್ದಾರೆ ಎಂದು ಗೊತ್ತಿಲ್ಲ.

ಪ್ರತಿವಾದಿ 12 ಮತ್ತು 13 ರವರಿಗೆ ದಾವಾ ಐಟಂ ನಂ.9 ಮತ್ತು 10 ರಲ್ಲಿ ಮೂರು ಎಕರೆ ಜಮೀನನ್ನು ಮಾರಾಟ ಮಾಡಿರುತ್ತಾರೆ. ದಾವಾ ಐಟಂ ನಂ.9 ಮತ್ತು 10 ಪ್ರತಿವಾದಿಗಳಿಗೆ ಹೇಗೆ ಬಂತು ಎಂಬ ಪ್ರಶ್ನೆಗೆ ಸಾಕ್ಷಿ ಚಿಕ್ಕಣ್ಣ ಈರಪ್ಪ ಇವರಿಂದ ಕ್ರಯಕ್ಕೆ ಪಡೆದುಕೊಂಡಿದ್ದಾರೆ ಎಂದು ನುಡಿಯುತ್ತಾರೆ. ಚಿಕ್ಕಣ್ಣ , ಈರಪ್ಪ ಮತ್ತು ಪ್ರತಿವಾದಿಗಳಿಗೆ ಯಾವುದೇ ಸಂಬಂಧವಿಲ್ಲ. ಪಟೇಲ್ ಚಿಕ್ಕೇಗೌಡ ಬಿನ್ ಸಣ್ಣಜ್ಜನ ಹೆಸರಿನಲ್ಲಿ ಕೊಂಡುಕೊಂಡಿರುತ್ತಾರೆ. ಅವರು ನನಗೆ ತಾತನಾಗಬೇಕು. ಒಟ್ಟು 68 ಎಕರೆ 15 ಗುಂಟೆಯನ್ನು ಕೊಂಡುಕೊಂಡಿರುತ್ತಾರೆ. ಕೊಂಡುಕೊಂಡ ನಂತರ ಪ್ರತಿವಾದಿಗಳ ಹೆಸರಿಗೆ ಖಾತೆಯಾಗಿರುತ್ತದೆ. ಖಾತೆ ಬದಲಾದ ಬಗ್ಗೆ ನನ್ನ ತಾತನಾಗಲೀ, ನನ್ನ ತಂದೆಯಾಗಲೀ , ನಾನಾಗಲೀ ಯಾವುದೇ ತಕರಾರು ಸಲ್ಲಿಸಿಲ್ಲ. ನನಗೆ ಬುದ್ದಿಬಂದ ನಂತರ ತಕರಾರು ಕೊಟ್ಟಿಲ್ಲ ಸಾಕ್ಷಿ ಮುಂದುವರೆದು ಆಗಲೇ ಖಾತೆಯಾಗಿತ್ತು ಎಂದು ನುಡಿಯುತ್ತಾರೆ.

ಖಾತೆಯನ್ನು ಪ್ರತಿವಾದಿಗಳು ಮತ್ತು ಕಂದಾಯ ಅಧಿಕಾರಿಗಳು ಮಿಲಾಪಿಯಾಗಿ ಮಾಡಿಕೊಂಡಿರುತ್ತಾರೆ. ದಾವಾ ಸಲ್ಲಿಸುವಾಗ ಈ ವಿಚಾರನ್ನು ತಿಳಿಸಿರುತ್ತೇನೆ. ನಾವು ಮೊನ್ನೆ ದಾವಪತ್ರವನ್ನು ತಿದ್ದು ಪಡಿ ಮಾಡಿಕೊಂಡಿರುತ್ತೇವೆ. ದಾವಾಸ್ತಿ 9, 10 ರಲ್ಲಿ ನನಗಾಗಲೀ , ನನ್ನ ತಾತ, ನನ್ನ ತಂದೆಗಾಗಲೀ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ದಿಃ28.06.1991 ರಲ್ಲಿ

ಮಹಲಿಂಗಪ್ಪ , ಚಿಕ್ಕೇಗೌಡ ಮತ್ತು ಶ್ರೀಪಾತಯ್ಯನವರು ವಿಭಾಗ ಮಾಡಿಕೊಂಡಿರುತ್ತಾರೆ. ನಮಗೂ ಮತ್ತು ಪ್ರತಿವಾದಿಗಳ ಕುಟುಂಬಕ್ಕೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ. ಹಿಂದೆ ನಮ್ಮ ಹೆಸರಿಗೆ ಬಂದ ಆಸ್ತಿಗಳನ್ನೇಲ್ಲಾ ಮಾಡಿಕೊಂಡು ಬಂದು ಈಗ ಪ್ರತಿವಾದಿಗಳ ಹಿಸ್ಸೆಯಲ್ಲಿ ವಿಭಾಗ ಬೇಕು ಎಂದು ಕೋರುತ್ತಿದ್ದೇವೆ ಎಂದರೆ ಸರಿಯಲ್ಲ. ದಾವಾ ಐಟಂ ನಂ.9 ಮತ್ತು 10 ರಲ್ಲಿ ನನಗಾಗಲೀ ನಮ್ಮ ವಾರಸುದಾರರಿಗಾಗಲೀ ಯಾವುದೇ ಹಕ್ಕು ಸ್ವಾಧೀನವಿಲ್ಲ ಎಂದರೆ ಸರಿಯಲ್ಲ. ದಾವಾ ಐಟಂ ನಂ.9 ಮತ್ತು 10 ರಲ್ಲಿ ಪ್ರತಿವಾದಿಗಳಿಗೆ ಮಾತ್ರ ಸಂಪೂರ್ಣ ಹಕ್ಕು ಸ್ವಾಧೀನ ಇದೆ ಎಂದರೆ ಸರಿಯಲ್ಲ.

ನಮಗೆ ಈ ದಾವೆ ಸಲ್ಲಿಸಿದ ನಂತರ ಪ್ರತಿವಾದಿಗಳು ಮಾರಾಟ ಮಾಡಿದ ವಿಚಾರ ಗೊತ್ತಾಗಿರುತ್ತದೆ. ಪ್ರತಿವಾದಿಗಳು ಮಾಡಿಕೊಂಡ ಪಾಲು ವಿಭಾಗ ಪತ್ರ ನಮಗೆ ಬಂಧನಕಾರಿ ಎಂದರೆ ಸರಿಯಲ್ಲ. ದಾವಾಸ್ತಿಯಲ್ಲಿ ನಮಗೆ ಯಾವುದೇ ಹಕ್ಕು ಇಲ್ಲದಿದ್ದರೂ ಸಹ ಪ್ರತಿವಾದಿಗಳಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

**<u>3, 7 ರಿಂದ 9, 10 ನೇ ಪ್ರತಿವಾದಿಗಳ ಪರ ವಕೀಲರು ಗೈರು ಹಾಜರು ಆದ್ದರಿಂದ ಪಾಟೀ ಸವಾಲು ಇಲ್ಲ ಎಂದು ಪರಿಗಣಿಸಲಾಯಿತು.</u>**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು )

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ , ಹಿರಿಯೂರು